# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **844 (858)** |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 22.02.2024 |
| 4) | ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಾರ್ಮಿಕ ಇಲಾಖೆಯಡಿಯಲ್ಲಿ ಬರುವ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯದ ಸಂಸ್ಥೆಗಳು ಯಾವುವು; ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಮಂಜೂರಾದ ಒಟ್ಟು ಹುದ್ದೆ ಹಾಗೂ ಖಾಲಿ ಹುದ್ದೆಗಳೆಷ್ಟು; (ವೃಂದ ಮತ್ತು ನೇಮಕಾತಿವಾರು ವಿವರ ನೀಡುವುದು)</td><td>ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕಾರ್ಮಿಕ ಸಚಿವಾಲಯದ ವ್ಯಾಪ್ತಿಗೆ ಒಳಪಡುತ್ತದೆ. ಈ ಇಲಾಖೆಯಲ್ಲಿನ ವೃಂದವಾರು ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರ ಈ ಮುಂದಿನಂತಿದೆ.
<table>
<tr><th rowspan="2">ವೃಂದ</th><th colspan="2">ತಾಂತ್ರಿಕ ಹುದ್ದೆಗಳು</th><th colspan="2">ತಾಂತ್ರಿಕೇತರ ಹುದ್ದೆಗಳು</th></tr>
<tr><td>ಮಂಜೂರಾದ ಹುದ್ದೆಗಳ ಸಂಖ್ಯೆ</td><td>ಕಾರ್ಯನಿರತ ಹುದ್ದೆಗಳ ಸಂಖ್ಯೆ</td><td>ಮಂಜೂರಾದ ಹುದ್ದೆಗಳ ಸಂಖ್ಯೆ</td><td>ಕಾರ್ಯ – ನಿರತ ಹುದ್ದೆಗಳ ಸಂಖ್ಯೆ</td></tr>
<tr><td>ಗ್ರೂಪ್ "ಎ" (ಅಧಿಕಾರಿ ವರ್ಗ)</td><td>33</td><td>29</td><td>01</td><td>01</td></tr>
<tr><td>ಗ್ರೂಪ್"ಬಿ" (ಅಧಿಕಾರಿ ವರ್ಗ)</td><td>27</td><td>06</td><td>11</td><td>11</td></tr>
<tr><td>ಗ್ರೂಪ್"ಸಿ" (ಸಿಬ್ಬಂದಿ ವರ್ಗ)</td><td>-</td><td>-</td><td>157</td><td>96</td></tr>
<tr><td>ಒಟ್ಟು</td><td>60</td><td>35</td><td>217</td><td>115</td></tr>
</table>
ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿವಾರು ಮಂಜೂರಾದ ಒಟ್ಟು ಹುದ್ದೆ, ಭರ್ತಿಯಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರವನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಈ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೇವಾ ಸೌಲಭ್ಯಗಳ ಸೇವೆಯನ್ನು ಆನ್-ಲೈನ್ ಒದಗಿಸಲಾಗಿದೆಯೇ; ಅದಕ್ಕಾಗಿ ಎಷ್ಟು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ; ಹಾಗಿದ್ದಲ್ಲಿ, ತಾಂತ್ರಿಕೇತರ ಹುದ್ದೆಗಳಿಗೆ ಯಾವ ವಿಧದ ಕೆಲಸ ಕಾರ್ಯವನ್ನು ಹಂಚಿಕೆ ಮಾಡಲಾಗಿದೆ; (ಸಂಪೂರ್ಣ</td><td>ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೇವಾ ಸೌಲಭ್ಯಗಳ ಸೇವೆಯನ್ನು ಆನ್-ಲೈನ್ ಮೂಲಕ ಒದಗಿಸಲಾಗುತ್ತಿದೆ.<br>ಪ್ರಸ್ತುತ ಇಲಾಖೆಯಲ್ಲಿ ಯಾವುದೇ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಿಕೊಂಡಿರುವುದಿಲ್ಲ.<br>ಈ ಇಲಾಖೆಯಲ್ಲಿ ಆನ್-ಲೈನ್ ಮೂಲಕ ಅರ್ಜಿಗಳನ್ನು ಪಡೆಯುವ ಸಂಬಂಧ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.</td></tr>
</table>

| | | |
|---|---|---|
| | ವಿವರ ನೀಡುವುದು) | ಅಲ್ಲದೆ ಇಲಾಖೆಯಲ್ಲಿ ಆನ್-ಲೈನ್ ಮೂಲಕ ಅರ್ಜಿಗಳನ್ನು ಪಡೆಯುವ ಸಂಬಂಧ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br>ಅಲ್ಲದೆ ಇಲಾಖೆಯಲ್ಲಿ ಆನ್-ಲೈನ್ ಸೇವೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಒಬ್ಬ ನುರಿತ ಸಿಸ್ಟಮ್ ಅನಾಲಿಸ್ಟ್ ಅನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.<br>ಇಲಾಖೆಯ ತಾಂತ್ರಿಕೇತರ ಹುದ್ದೆಗಳಿಗೆ ಹಂಚಿಕೆ ಮಾಡಲಾಗಿರುವ ಕೆಲಸ ಕಾರ್ಯದ ಸಂಪೂರ್ಣ ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |
| ಇ | ಮಾನ್ಯ ಶ್ರೀ ಹಾರನಹಳ್ಳಿ ರಾಮಸ್ವಾಮಿ ಮತ್ತು ಶ್ರೀ ಟಿ.ಎಂ. ವಿಜಭಾಸ್ಕರ್ IAS (RETD) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಆಯೋಗ-2 ರವರ ವರದಿಯಲ್ಲಿ ತಾಂತ್ರಿಕೇತರ ಹುದ್ದೆಗಳನ್ನು ರದ್ದುಪಡಿಸಿ ಸಂಸ್ಥೆಗೆ ಅವಶ್ಯವಿರುವ ತಾಂತ್ರಿಕ ಹುದ್ದೆಗಳನ್ನಾಗಿ ಪರಿವರ್ತಿಸುವ ಸಲುವಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ರಲ್ಲಿ ಇಲಾಖೆಯ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಲಾಗಿದೆ.<br>ಅದರಲ್ಲಿ ಇಲಾಖೆಯಲ್ಲಿ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಒಂದು ಶಿಫಾರಸ್ಸು ಈ ಮುಂದಿನಂತಿದೆ.<br>"ಆನ್ ಲೈನ್ ಸೇವೆಗಳ ವಿತರಣೆಯ ಪರಿಣಾಮವಾಗಿ, ನಿರ್ದೇಶನಾಲಯದಲ್ಲಿ ಲಿಪಿಕ ವರ್ಗದ ಕೆಲಸದ ಹೊರೆ ಗಣನೀಯವಾಗಿ ಕಡಿಮೆಯಾಗಿದೆ. ಹೆಚ್ಚಿನ ತಪಾಸಣೆ ಕೈಗೊಳ್ಳಲು ಮತ್ತು ಉತ್ತಮ ಅನುಷ್ಠಾನಕ್ಕಾಗಿ ಕೆಲವು ಲಿಪಿಕ ವರ್ಗದ ಸಿಬ್ಬಂದಿಯನ್ನು ತಾಂತ್ರಿಕ ಸಿಬ್ಬಂದಿಯನ್ನಾಗಿ ಪರಿವರ್ತಿಸುವ ಮೂಲಕ ಇಲಾಖೆಯನ್ನು ಪುನರ್ ರಚಿಸಬಹುದಾಗಿದೆ. ನಿರ್ದೇಶಕರು, ಕಾರ್ಖಾನೆಗಳು ಮತ್ತು ಬಾಯ್ಲರುಗಳು ಇವರು ಲಭ್ಯವಿರುವ ವೃಂದಗಳು ಮತ್ತು ಮಂಜೂರಾದ ಹುದ್ದೆಗಳನ್ನು ಅಧ್ಯಯನ ಮಾಡಿ ಇಲಾಖೆಯ ಪುನರ್ ರಚನೆಗೆ ಪ್ರಸ್ತಾವನೆ ಸಲ್ಲಿಸಬಹುದು. ಹೆಚ್ಚುವರಿ ಆರ್ಥಿಕ ಪರಿಣಾಮಗಳಿಲ್ಲದೆ ಕೆಲವು ವೃಂದಗಳಲ್ಲಿನ ದ್ವಿತೀಯ ದರ್ಜೆ ಸಹಾಯಕರುಗಳಂತಹ ಹುದ್ದೆಗಳನ್ನು ರದ್ದುಪಡಿಸಲು ಮತ್ತು ಅಗತ್ಯವಿರುವ ವೃಂದಗಳಲ್ಲಿ ಹುದ್ದೆಗಳನ್ನು ಸೃಜಿಸಲು ನಿರ್ದೇಶನಾಲಯದ ಪುನರ್ ರಚನೆ ಪ್ರಸ್ತಾಪಿಸಬಹುದು".<br>ಸದರಿ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ಕುರಿತಂತೆ ಸಮಗ್ರವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಇಲಾಖೆಯ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಅಧಿಕಾರಿ / ಸಿಬ್ಬಂದಿಗಳಿಂದ ಅಭಿಪ್ರಾಯ / ಸಲಹೆಗಳನ್ನು ಪಡೆದು ಶಿಫಾರಸ್ಸಿನಲ್ಲಿರುವ ಅಂಶಗಳನ್ನು ಸಮಗ್ರವಾಗಿ ಅವಲೋಕಿಸಿ ಪರಿಷ್ಕೃತ ಅಧಿಕಾರಿ /ಸಿಬ್ಬಂದಿ ವಿನ್ಯಾಸವನ್ನು ತಯಾರಿಸಲು ಸಮಿತಿ ಸೂಚಿಸಲಾಗಿದೆ. ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ. |

**ಕಾಇ 27 ಕಾಬಾನಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**